# ಬಿ.ಸಿ.ಎ
# ಮೊದಲನೇ ಸೆಮಿಸ್ಟರ್



# ಪರಿವಿಡಿ

## I. ಕಾವ್ಯಭಾಗ

೧. ಬಿದಿಯಂ ಮೀಱುಗುಮೆ ಪೆಱರ ಪೇೞ್ದುಪದೇಶಂ
– ನಾಗಚಂದ್ರ ೧–೫
೨. ವಚನಗಳು
– ಬಸವಣ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ ೬–೧೦
೩. ಅನ್ನಯಜ್ಞ – ದ.ರಾ. ಬೇಂದ್ರೆ ೧೧–೧೨
೪. ಸಂಪರ್ಕ – ಗಂಗಾಧರ ಚಿತ್ತಾಲ ೧೩–೧೫

## II. ಕಥಾಸಾಹಿತ್ಯ

೧. ಪರೀಕ್ಷಿತ – ಚದುರಂಗ ೧೬–೨೬
೨. ಮಾಯಾಮೃಗ – ಕೆ.ಪಿ. ಪೂರ್ಣಚಂದ್ರ ತೇಜಸ್ವಿ ೨೭–೪೨
೩. ಪಾರಿವಾಳದ ರೆಕ್ಕೆಗಳ ಹಾಡು – ಬಾನು ಮುಷ್ತಾಕ್ ೪೩–೫೮

## III. ಜಾನಪದ

೧. ಹೂ ಕೊಟ್ಟ ಚದುರೆ – (ಸಂ) ಜೀ.ಶಂ.ಪ ೫೯–೬೧
೨. ಕೊಣವೇಗೌಡ – ಜನಪದ ಲಾವಣಿ ೬೨–೬೭
೩. ಜನಪದ ಸಾಹಿತ್ಯದ ಪುನರುಜ್ಜೀವನ
ಲೇ. – ಎಚ್.ಎಲ್. ನಾಗೇಗೌಡ ೬೮–೮೮

## IV. ಲೇಖನ ವೈವಿಧ್ಯ

೧. ಗುಳೆ ಏಳುತ್ತಿರುವ ಗ್ರಾಮೀಣ ಶರಣರು – ಪ್ರಸನ್ನ ೮೯–೯೫
೨. ಕೋಟಿ ಮಿದುಳುಗಳ ಬೆಸೆಯುವ ಕೆಲಸ
– ನಾಗೇಶ ಹೆಗಡೆ ೯೬–೧೦೨
೩. ಈ ಗೋಡೆ ಮೇಲೆ ಭಯಂಕರ ಬರಹ ಬೇಡ
– ಡಾ. ಆರ್. ಪೂರ್ಣಿಮಾ ೧೦೩–೧೧೦

# I. ಕಾವ್ಯಭಾಗ

## ೧. ಬಿದಿಯಂ ಮೀಱುಗುಮೆ ಪೆಱರ ಪೇೞ್ದುಪದೇಶಂ

– ನಾಗಚಂದ್ರ

**ಆಶಯ :**

ಮನುಷ್ಯ, ಧರ್ಮ, ನಿಷ್ಠೆ, ಪ್ರೇಮ, ತ್ಯಾಗ, ಇತ್ಯಾದಿ ಸದ್ಗುಣಗಳಿಂದ ಬಾಳಿ, ಇತರರನ್ನು ಬಾಳಿಸುವಂತಾದರೆ ಅಂತಹ ಮನುಷ್ಯನನ್ನು ಈ ಸಮಾಜ ಗುಣಗಾನ ಮಾಡುತ್ತ ಬಂದಿದ್ದು, ಇದಕ್ಕೆ ವಿರುದ್ಧವಾಗಿ ಪರನಿಂದನೆ ಮಾಡುತ್ತ, ಪರರಿಗೆ, ಪರವಸ್ತುಗಳಿಗೆ ಆಸೆ ಪಡುತ್ತಾ ಅವಮಾನವೀಯವಾಗಿ ನಡೆದುಕೊಂಡವರನ್ನು ಸಮಾಜ ಎಂದೂ ಒಪ್ಪಿದಂತೆ ಕಾಣುವುದಿಲ್ಲ. ಗೋರಕ್ಷಣೆ, ಸ್ತ್ರೀರಕ್ಷಣೆಗಳಿಗೆ ನಿಂತ ವೀರರನ್ನು ಸಮಾಜ ಸತ್ಕರಿಸಿದ ಉದಾಹರಣೆಗಳು ಉಂಟು ; ಆ ಗುಣಗಳು 'ಮೌಲ್ಯ'ಗಳಾಗಿದ್ದುದು ಉಂಟು ಹಾಗೆಯೇ ದ್ರೌಪದಿಗೆ ಅವಮಾನ ಮಾಡಿದ ದುರ್ಯೋಧನಾದಿಗಳನ್ನಾಗಲ್ಲಿ, ಸೀತಾಪಹರಣ ಮಾಡಿದ ರಾವಣನನ್ನಾಗಲ್ಲಿ ಈ ಸಮಾಜ ಮೆಚ್ಚಲಿಲ್ಲ. ಆದರೆ ನಾಗಚಂದ್ರನ ರಾವಣ ಹಾಗೆ ಸೀತಾಪಹರಣ ಮಾಡಿದರೂ ಅದಕ್ಕೆ ರಾವಣನೊಬ್ಬನೇ ಕಾರಣನಲ್ಲ ಎಂದು ಚಿತ್ರಿಸಿರುವುದರ ಹಿಂದೆ ಕವಿಯ ವಿಭಿನ್ನ ದೃಷ್ಟಿಕೋನ ವಿರುವುದು ಕಾಣುತ್ತದೆ.

ಭಾರತೀಯ ಸಾಹಿತ್ಯದಲ್ಲಿ ರಾಮಾಯಣ ಕಥಾವಸ್ತು ಮೂರು ಕವಲಾಗಿ ಬೆಳೆದು ಬಂದಿದೆ. ಒಂದನೆಯದು ವಾಲ್ಮೀಕಿ ರಾಮಾಯಣದ ವೈದಿಕ ಪರಂಪರೆ; ಎರಡನೆಯದು ವಿಮಲಸೂರಿಯ ಜೈನಪರಂಪರೆ ; ಮೂರನೆಯದು ಬೌದ್ಧ ಜಾತಕಗಳಲ್ಲಿ ನಿರೂಪಿತವಾದ ಬೌದ್ಧಪರಂಪರೆ. ಕನ್ನಡ ಸಾಹಿತ್ಯದಲ್ಲಿ ರಾಮಚರಿತೆಯ ಕಥಾವಸ್ತುವನುಳ್ಳ ಪ್ರಥಮ ಕೃತಿ ನಾಗಚಂದ್ರನ ರಾಮಚಂದ್ರಚರಿತ ಪುರಾಣ. ನಾಗಚಂದ್ರನ ವೈಶಿಷ್ಟವಿರುವುದು ರಾವಣಪಾತ್ರದಲ್ಲಿ . ಸೀತಾಪಹರಣ ರಾವಣನ ಜೀವನದಲ್ಲಿ ಮಹತ್ತರ ತಿರುವು. ತನ್ನ ಪೌರುಷ ಮತ್ತು ಆತ್ಮಬಲದಲ್ಲಿ ಬಲವಾದ ನಂಬಿಕೆಯಿದ್ದ ರಾವಣ ಹೆಣ್ಣ(ಸೀತೆ)ನ್ನು ನೋಡಿದ ಕೂಡಲೆ ವಿಚಲಿತನಾದುದು ಕೇವಲ ವಿಧಿಯ ಆಟವೇ ಸರಿ ಎಂಬುದು ಕವಿ ರಾವಣನ ಪರನಾಗಿದಾನೆ ಎಂಬುದಕ್ಕೆ



ಸಾಕ್ಷಿ. ಹಾಗಾಗಿಯೇ ಅವನಿಗೆ ತನ್ನ ಅಧಿದೇವತೆಯಾದ ಅವಲೋಕಿನಿಯ ಒಳ್ಳೆಯ ಮಾತುಗಳು ಹಿಡಿಸುವುದಿಲ್ಲ.

ಆ ಸಮಯದೊಳ್ ದಶಾಸ್ಯನೊಂದು ತಣ್ಬುಟೆಲ ತಾಣದೊಳ್ ಬಱಸಿಡಿಲ ಬಟೆವಿಡಿದು ಪೊಳೆವ ಕುಡುಮಿಂಚಿನಂತೆ ಬಲಭದ್ರನ ಕೆಲದೊಳಿರ್ದ ಸೀತೆಯಂ ಕಂಡು–

ವ॥ ಬಲೆ, ದೃಷ್ಟಿಗೆ ವಜ್ರದ ಸಂ
ಕಲೆ ಹೃದಯಕ್ಕೆ ನಿಪ ರೂಪವತಿ ಜಾನಕಿ ॥ಕ॥
ಣ್ಬೊಲದೊಳಿರೆ ಪದ್ಮಪತ್ರದ
ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ ॥೧॥

ತಳತಳಿಸಿ ಪೊಳೆಯೆ ಸೀತೆಯ
ಚಳ ನಯನಂ ಖಚರ ಚಕ್ರವರ್ತಿಯ ಚಿತ್ತಂ ॥
ಕೊಳದೊಳಗೆಳವಾಳೆ ತೆಱಂ
ಬೊಳೆವಂತೆ ಕಲಂಕಿ ಕದಡಿದತ್ತಾ ಕ್ಷಣದೊಳ್ ॥೨॥

ಉ ॥ ಹಾರ ಮರೀಚಿ ಮಂಜರಿ ಸುಧಾರಸ ಧಾರೆ ಸುಧಾಂಶು ಲೇಖೆ ಕ।
ರ್ಪೂರ ಶಲಾಕೆ ನೇತ್ರಸುಖ ದಾಯಕಮಿಾದೊರೆತಲ್ಲವೀಕೆ ಶೃಂ ॥
ಗಾರ ಸಮುದ್ರಮಂ ಕಡೆಯೆ ಹೃದ್ಭವನುದ್ಭವೆಯಾದಳೆಂದು ಕ ।
ಣ್ಣಾರೆ ದಶಾಸ್ಯನೀಕ್ಷಿಸಿದನಿಕ್ಷಿಸಿ ಕಣ್ಣಱೆದಾರೆ ಮನ್ಮಥಂ ॥೩॥

ಮ॥ಸ್ರ॥ಪಲರುಂ ವಿದ್ಯಾಧರಸ್ತ್ರೀಯರುಮಮರಿಯರುಂ ಮಾನವ ಸ್ತ್ರೀಯರುಂತ

ಮ್ಮೊಲವಿಂ ಮೇಲ್ವಾಯ್ದೊಡಂ ಮಂಬಗೆಯದ ಬಗೆಯೇನಾದುದೆಂದುದ್ಧ
ತಂ ಮೂ ॥
ದಲಿಸುತ್ತುಂ ರೂಪಿನೊಳ್ ಮಚ್ಚರಿಸುವನೆನಗೆಂದಂಬನಂಬಟ್ಟುವನ್ನಂ ।
ಪಲಕ್ಕಾಲಕ್ಕೇಸುವೆತ್ತಂ ದಶಮುಖನೆನುತಂ ಮನ್ಮಥಂ ಮಾಣದೆಚ್ಚಂ ॥೪॥

ನಡೆ ನಡುಗೋಲ್ವರಂ ದಶಮುಖಂ ಮನಮಂ ಸುಮನಶ್ಶಿಲೀಮುಖಂ
ನಡೆಗಿಡೆ ಕೀರ್ತಿ ಬಾರ್ತೆಗಿಡೆ ಲಕ್ಷ್ಮಿ ಮೊದಲ್ಗಿಡೆ ಮಾನಸಿಕ್ಕೆ ನೇ ॥
ರ್ಪಡುಗಿಡೆ ಸತ್ಯ ಶೌಚ ಗುಣ ಸಂಪದವೇಳಿದನಾದನೆನ್ನುರುಂ ।
ಕಿಡಿಮಸಿಯಾದವೋಲ್ ವಿಷಯ ಲೋಭದಿನೇಳಿದರಾಗದಿರ್ಪರೇ ॥೫॥

ವಿಹಿತಾಚಾರಮನನ್ವಯಾಗತ ಗುಣ ಪ್ರಖ್ಯಾತಿಯಂ ದುಷ್ಟ ನಿ ।
ಗ್ರಹ ಶಿಷ್ಟ ಪ್ರತಿಪಾಲನ ಕ್ಷಮತೆಯಂ ಕೈ ಗಾಯದನ್ಯಾಂಗನಾ ॥
ಸ್ಪೃಹೆಯಂ ತಾಳ್ದಿದನಲ್ತೆ ಕಾಲವಶದಿಂ ಲಂಕೇಶ್ವರಂ ವಿಸ್ಮಯಾ ।
ವಹಮಲ್ತಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ ॥೬॥

ಅಂತು ಮನವೆಳದುವರಿಯೆ–
ಅವಿವೇಕಿ ದಶಮುಖಂ ದೃ
ಷ್ಟಿ ವಿಷಾಹಿಯ ಪೆಡೆಯ ಮಣಿಶಲಾಕೆಗೆ ಕೈ ನೀ ॥
ಡುವ ಗಾಂಪನಂತೆ ರಘುವೀ
ರ ವಧೂ ಜನಕಜೆಗೆ ಮನದೊಳಟೆಪಂ ತಂದಂ ॥೭॥

ಪರವಧುಗಾಸೆಗೆಯ್ವಧಿಕ ಪಾತಾಕಮೊಂದು ರಘುಪ್ರವೀರನೊಳ್ ।
ಧುರದೊಳಿದಿರ್ಚದೋಸರಿಸಿ ವಂಚಿಸಿ ಸೀತೆಯನುಯ್ವ ಭೀತಿಯೊಂ ॥
ದೆರಡಱೊಳಂ ಜಸಂ ಮಸುಳೆ ತನ್ನವಲೋಕಿನಿಯಂ ದಶಾನನಂ ।
ಸ್ಮರಿಸಿದನಾತ್ಮ ಸತ್ವಗುಣ ಹಾನಿಯೆ ಸೂಚಿಸದೇ ವಿನಾಶಮಂ ॥೮॥

ಅಂತು ನೆನೆಯಲೊಡಮವಲೋಕಿನೀವಿದ್ಯೆ ಮನದೊಡನೆ ಬಂದು ಬೆಸನಾವುದೆನೆ ದಶಮುಖನಿವರಾರೆಂಬುದುಮಯೋಧ್ಯಾ ಸಿಂಹಾಸನಕ್ಕಧಿಪತಿಯುಮಿಕ್ಷ್ವಾಕು ವಂಶ ಸಂಭವನುಮಪ್ಪನರಣ್ಯ ತನೂಭವಂ ದಶರಥ ನರನಾಥಂ ತದಪತ್ಯರಿವರೀಕಾಲದ ಬಲದೇವ ವಾಸುದೇವರ್ ದೇವತಾಧಿಷ್ಠಿತಂಗಳಪ್ಪ ವಜ್ರಾವರ್ತ ಸಾಗರಾವರ್ತ ಚಾಪ ರತ್ನಂಗಳಿನಪ್ರಯತ್ನದಿಂ ಪಡೆದ ರಾಮಲಕ್ಷ್ಮಣರೆಂಬರ್, ಮಹಾಬಲ



ಪರಾಕ್ರಮರೀಕೆ ರಾಮನ ಮಹಾದೇವಿ ಮಿಥಿಲಾಪುರವರೇಶ್ವರನಪ್ಪ ಹರಿವಂಶದಜನಕನ ತನೂಭವೆ ರಥನೂಪುರಚಕ್ರವಾಳಪುರಮ ನಾಳ್ವ ಚಂಡಬಲ ಪರಾಕ್ರಮನಪ್ಪ ಪ್ರಭಾಮಂಡಲನ ತಂಗೆ ಸೀತಾದೇವಿಯೆಂಬಳೆಂಬುದುಮಿಾಕೆಯನೀತನಿಂದಗಲ್ಚು ಪ್ರಪಾಯಮಾವುದೆನೆ ದೇವತೆ ಭಯಚಕಿತ ಚಿತ್ತೆಯಾಗಿ–

ಆರಯ್ಯೆ ವಿರೋಧಂ ಸಾ
ಧಾರಣ ಪುರುಷರೊಳಮುಚಿತಮಲ್ತಧಿಕ ಬಲರ್ ॥
ಕಾರಣಪುರುಷರಿವರ್ ನಿ
ಷ್ಕಾರಣವಿವರೊಳ್ ವಿರೋಧಮಂ ಮಾಡುವುದೇ ॥೯॥

ಕಾವ ಬೆಸಂ ನಿನ್ನದು ಸಕ
ಲಾವನಿಯನಧರ್ಮನಿರತರಂ ನಿಯಮಿಸಿ ನೀ ॥
ನೀವಿಷಯಕ್ಕೆಱಗುವುದುಂ
ಕಾವರೆ ಕಣೆಗೊಂಡರೆಂಬ ನುಡಿಗೆಡೆಯಕ್ಕುಂ ॥೧೦॥

ಆನ್ನೆಯದಿಂ ನಡೆವವರಂ
ನೀನ್ನಿಯಮಿಸುವೈ ದಶಾಸ್ಯ ಪೆಱನಾವಂ ನಿ ॥
ನ್ನನ್ನಿಯಮಿಸುವಂ ಮುನ್ನೀರ್
ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೇ ॥೧೧॥

ಎಂದು ತೆಱೆಯೆ ನುಡಿದುದರ್ಕೆ ಕಡುಮುಳಿದು–

ಕಂ॥ ಮದನ ಯಶಃಪಟಹ ಧ್ವನಿ
ಪುದಿಯೆ ವಿಯಚ್ಚರನ ಕರ್ಣಮಂ ಹೃದಯ ॥
ಕ್ಕೆಯ್ದಿದುದಿಲ್ಲ ದಿವ್ಯ ವಚನಂ
ಬಿದಿಯಂ ಮಿಾಱುಗುಮೆ ಪೆಱರ ಪೇೞ್ದುಪದೇಶಂ ॥೧೨॥

## ಕವಿ ಪರಿಚಯ

**ನಾಗಚಂದ್ರ :** ನಾಗಚಂದ್ರ ೧೧ನೇ ಶತಮಾನದ ಕೊನೆಯ, ೧೧೧೦ರ ಸುಮಾರಿನಲ್ಲಿ ಬದುಕಿದ್ದ ಕವಿ. ಈತನಿಗೆ 'ಅಭಿನವ ಪಂಪ' ಎಂಬ ಬಿರುದಿತ್ತು. ಚಾಲುಕ್ಯ ರಾಜನಿಂದಲೂ, ಹೊಯ್ಸಳ ಬಲ್ಲಾಳನಿಂದಲೂ ಸನ್ಮಾನ ಪಡೆದಿದ್ದನೆಂದು ತಿಳಿದುಬರುತ್ತದೆ. ಈತನ ಎರಡು ಕೃತಿಗಳು 'ಮಲ್ಲಿನಾಥ ಪುರಾಣಂ' ಮತ್ತು 'ರಾಮಚಂದ್ರ ಚರಿತ ಪುರಾಣಂ' (ಪಂಪ ರಾಮಾಯಣ). ಪಂಪರಾಮಾಯಣ ಕನ್ನಡದಲ್ಲಿ ದೊರೆತಿರಬಹುದಾದ ಮೊದಲನೇ ಜೈನರಾಮಾಯಣ ಕೃತಿಯಾಗಿದೆ. ಈ ಕೃತಿಯಲ್ಲಿ ಕವಿಯ ಕಲ್ಪನೆ, ಶೈಲಿ ಅತ್ಯುತ್ತಮ ಸ್ಥಿತಿಯನ್ನು ಮುಟ್ಟಿದೆ. ಇದು ಪಂಪಭಾರತ (ವಿಕ್ರಮಾರ್ಜುನ ವಿಜಯ)ದ ಮಾನ್ಯಕ್ಕೆ ಏರದಿದ್ದರೂ ಆ ಪ್ರಯತ್ನ ನಡೆದಿದೆ. ಆ ದೃಷ್ಟಿಯಲ್ಲಿ ಈತನಿಗೆ ಅಭಿನವಪಂಪ ಎಂಬ ಬಿರುದು ಸಾರ್ಥಕವಾಗಿದೆ.

ವಾಲ್ಮೀಕಿ ರಾಮಾಯಣದಲ್ಲಿ ರಾವಣ ಒಬ್ಬ ರಾಕ್ಷಸನೆಂಬಂತೆ ಚಿತ್ರಿತವಾಗಿದ್ದರೆ ಪಂಪರಾಮಾಯಣದಲ್ಲಿ ಒಬ್ಬ ಒಳ್ಳೆಯಮನುಷ್ಯನೆಂಬಂತೆ ಚಿತ್ರಿತಗೊಂಡಿದ್ದಾನೆ. ಇವರ ಮೇಲೆ ವಿಮಲಸೂರಿಯ 'ಪಉಮಚರಿಯ' ಕೃತಿಯ ಪ್ರಭಾವವಿದೆ.

**ಕಠಿಣ ಪದಗಳ ಅರ್ಥ :**

ತಣ್ಬುಮಿಲ–ತಂಪಾದ, ಚಳ–ಚಂಚಲ, ಎಳೆವಾಳೆ–ಮೀನು, ಅಮರಿಯರುಂ–ದೇವತೆಗಳು, ಮೇಲ್ವಯ್ದೊಡಂ–ಬಲವಂತವಾಗಿ ಮೈಮೇಲೆ ಬಿದ್ದರೂ, ಅಂಬು–ಬಾಣ, ಎಚ್ಚು–(ಬಾಣ) ಬಿದು, ಅಬ್ಧಿ–ಸಮುದ್ರ, ವಿಷಾಹಿ–ವಿಷಸರ್ಪ, ಗಾಂಪ–ದಡ್ಡ, ಜಸ–ಯಶಸ್ಸು, ಮಸುಳೆ–ಮಸುಕಾಗಲು, ಮುನ್ನೀರ್ – ಸಮುದ್ರದ ನೀರು, ಬೆನ್ನೀರ್ – ಬಿಸಿನೀರು, ಬಿದಿ–ವಿಧಿ, ಪೆಜರ ಬೇರೆಯವರ

**ಪ್ರಶ್ನೆಗಳು :**

೧. ಸೀತೆಯನ್ನು ಕಂಡಾಗ ರಾವಣನ ಮನಸ್ಸಿನಲ್ಲಾದ ಭಾವನೆಗಳು ಎಂತಹವು? ತಿಳಿಸಿ.

೨. ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ ಎಂದು ಹೇಳಿದುದರ ಹಿನ್ನೆಲೆಯನ್ನು ವಿವರಿಸಿ.

೩. ಅವಲೋಕಿನಿ ಮತ್ತು ರಾವಣರ ನಡುವೆ ನಡೆದ ಸಂವಾದವನ್ನು ತಿಳಿಸಿ.

*



# ೨. ವಚನಗಳು

**ಆಶಯ :**

ವಚನ ಎಂದರೆ ಮಾತು, ಪ್ರಮಾಣ ಎಂದು ಹಾಡಿದರೆ ಹಾಡಾಗುವ ಓದಿದರೆ ಗದ್ಯವಾಗುವ ಕನ್ನಡದ ವಿಶಿಷ್ಟ ಕಾವ್ಯ ಪ್ರಕಾರ ಇದು. ವಚನ ಸಾಹಿತ್ಯ ಚಳುವಳಿ ಎನ್ನುವಂತಾಗಿದ್ದು ಬದುಕಿನಲ್ಲಿ, ಸಾಹಿತ್ಯದಲ್ಲಿ ಹಾಗೂ ಆಧ್ಯಾತ್ಮದಲ್ಲಿ ಅಪೂರ್ವವಾದ ಸಾಧನೆಗಳಿಗೆ ಎಡೆಮಾಡಿಕೊಟ್ಟಂತಹ ಕಾಲಮಾನ. ಕಾಯಕ–ದಾಸೋಹಗಳ ಪರಿಕಲ್ಪನೆಯಲ್ಲಿ ಬದುಕು ಮತ್ತು ಧರ್ಮವನ್ನು ಸಂಲಗ್ನಗೊಳಿಸಿಕೊಂಡು ಕಲ್ಯಾಣ ರಾಜ್ಯದ ಕನಸನ್ನು ನನಸು ಮಾಡಲು ಪಣತೊಟ್ಟ ಆಂದೋಲನದವರು. ಆಳು–ಅರಸ, ಉಚ್ಚ–ನೀಚ ಎಂಬ ಬೋಧಗಳನ್ನು ಕಳಚಿ ಮಾನವ ಪ್ರೀತಿಯನ್ನು ಭಿತ್ತಿದ ಕಾಲವದು. ದೇವರದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಮಹಾದೇವಿಯಕ್ಕ, ಅಂಬಿಗರ ಚೌಡಯ್ಯ ಇವರೆಲ್ಲ ಸಮಕಾಲೀನರು ನಿಜವಾದ ಅರ್ಥದಲ್ಲಿ ಶರಣ ಧರ್ಮವನ್ನು ಬಾಳಿ ಬೆಳಗಿದ ಚೇತನರು. ಇಡೀ ವಚನ ಸಾಹಿತ್ಯವನ್ನು ಕೇವಲ ಧಾರ್ಮಿಕ ನೆಲೆಗಟ್ಟಿನ ದೃಷ್ಟಿಯಲ್ಲಿ ನೋಡುವುದಕ್ಕಿಂತ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ದೃಷ್ಟಿಕೋನದಿಂದ ನೋಡುವುದು ವೈಚಾರಿಕ ಓದು ಎನಿಸಿಕೊಳ್ಳುತ್ತದೆ.

**ಬಸವಣ್ಣ**

ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯ
ಪಶುವೇನ ಬಲ್ಲುದು? ಹಸುರೆಂದೆಳಸುವುದು
ವಿಷಯ ರಹಿತನ ಮಾಡಿ
ಭಕ್ತಿರಸವ ದಣಿಯೆ ಮೇಯಿಸಿ

ಸುಬುದ್ಧಿ ಯೆಂಬುದಕವನೆರೆದು
ನೋಡಿ ಸಲಹಯ್ಯಾ ಕೂಡಲ ಸಂಗಮದೇವಾ

ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ
ವಿಚಾರಿಸಿದೊಡೇನೂ ಹುರಳಿಲ್ಲವಯ್ಯ!
ಪ್ರಪಂಚದ ಡಂಬಿನಲ್ಲಿ, ಎನ್ನನೊಂದು ರೂಹು ಮಾಡಿ
ನೀವಿರಿಸಿದಿರಿ ಕೂಡಲಸಂಗಮದೇವಾ

ಸುರರ ಬೇಡಿದರಿಲ್ಲ! ನರರ ಬೇಡಿದರಿಲ್ಲ!
ಬರಿದೆ ಧೃತಿಗೆಡಬೇಡ ಮನವೇ
ಆರನಾದರೆಯೂ ಬೇಡಿ ಬೇಡಿ
ಬರಿದೆ ಧೃತಿಗೆಡಬೇಡ ಮನವೇ!
ಕೂಡಲಸಂಗಮದೇವರನಲ್ಲದೆ ಆರ ಬೇಡಿದರಿಲ್ಲ ಮನವೇ!

ಏನನೋದಿ, ಏನ ಕೇಳಿ, ಏನ ಮಾಡಿಯೂ
ಫಲವೇನು ನಿನ್ನವರೊಲಿಯದನ್ನಕ?
ಶಿವ ಶಿವ ಮಹಾದೇವ!
ಬಾಳಿಲ್ಲದವಳ ಒಲೆಯಂತಾಯಿತ್ತೆನಗೆ
ಕೂಡಲ ಸಂಗಮ ದೇವ.

ಮುನ್ನೂರರುವತ್ತು ದಿನ ಶರವ ಮಾಡಿ,
ಕಳನೇರಿ ಕೈಮರೆದಂತಾಯಿತ್ತೆನ್ನ ಭಕ್ತಿ!
ಎನಿಸು ಕಾಲ ಲಿಂಗಾರ್ಚನೆಯ ಮಾಡಿ
ಏವೆನಯ್ಯ ಮನದಲ್ಲಿ ದೃಢವಿಲ್ಲದನ್ನಕ?



## ಅಕ್ಕಮಹಾದೇವಿ

ಕಿಚ್ಚಿಲ್ಲದ ಬೇಗೆಯಲಿ ಬೆಂದೆನವ್ವ
ಏರಿಲ್ಲದ ಗಾಯದಲಿ ನೊಂದೆನವ್ವ
ಸುಖವಿಲ್ಲದ ಧಾವತಿಗೊಂಡೆನವ್ವ
ಚೆನ್ನಮಲ್ಲಿಕಾರ್ಜುನಂಗೊಲಿದು ಬಾರದ ಭವಂಗಳಲಿ ಬಂದೆನವ್ವ

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆನವ್ವಾ
ಎಡೆ ಇಲ್ಲದ ಕಡೆ ಇಲ್ಲದೆ ತೆರಹಿಲ್ಲದ ಕುರುಹಿಲ್ಲದ ಚೆಲುವಂಗಾನೊಲಿದೆ
ಎಲೆ ಅವ್ವಾ, ನೀನು ಕೇಳಾ ತಾಯೆ, ಭವವಿಲ್ಲದ ಭಯವಿಲ್ಲದ
ನಿರ್ಭಯ ಚೆಲುವಂಗೊಲಿದೆ ನಾನು ಕುಲಸೀಮೆ ಇಲ್ಲದ
ನಿಸ್ಸೀಮ ಚೆಲುವಂಗೆ ನಾನೊಲಿದೆ–ಇದು ಕಾರಣ
ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಿಗಿಕ್ಕು

ಹಸಿವಾದರೆ ಊರೊಳಗೆ ಭಿಕ್ಷಾನ್ನಂಗಳುಂಟು
ತೃಷೆಯಾದರೆ ಕೆರೆ–ಬಾವಿ–ಹಳ್ಳಗಳುಂಟು
ಶಯನಕ್ಕೆ ಹಾಳು ದೇಗುಲವುಂಟು
ಚೆನ್ನಮಲ್ಲಿಕಾರ್ಜುನಯ್ಯ ಆತ್ಮ ಸಂಗಾತಕ್ಕೆ ನೀನೆನಗುಂಟು

ಅರಿಯದವರೊಡನೆ ಸಂಗವ ಮಾಡಿದರೆ
ಕಲ್ಲಹೊಯ್ದು ಕಿಡಿಯ ತೆಗೆದುಕೊಂಡಬಂತೆ!
ಬಲ್ಲವರೊಡನೆ ಸಂಗವ ಮಾಡಿದರೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ
ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣರ ಸಂಗ
ಕರ್ಪೂರ ಗಿರಿಯ ಉರಿಯಕೊಂಡಂತೆ

**ಅಂಬಿಗರ ಚೌಡಯ್ಯ**

ಗಾಳಿ ಬಿಟ್ಟಲ್ಲಿ ತೂರಿಕೊಳ್ಳಿರಯ್ಯ
ಗಾಳಿ ನಿನ್ನಧೀನವಲ್ಲವಯ್ಯಾ
ನಾಳೆ ತೂರಿಹೆನೆಂದರೆ ಇಲ್ಲವಯ್ಯಾ
ಶಿವಶರಣರ ಎಂಬುದೊಂದು ಗಾಳಿ ಬಿಟ್ಟಲ್ಲಿ
ಬೇಗ ತೂರೆಂದ ಅಂಬಿಗರ ಚೌಡಯ್ಯ

ಬಡತನಕ್ಕೆ ಉಂಬುವ ಚಿಂತೆ
ಉಣಲಾದರೆ ಉಡುವ ಚಿಂತೆ
ಉಡಲಾದರೆ ಇಡುವ ಚಿಂತೆ
ಇಡಲಾದರೆ ಹೆಂಡಿರ ಚಿಂತೆ
ಹೆಂಡಿರಾದರೆ ಮಕ್ಕಳ ಚಿಂತೆ
ಮಕ್ಕಳಾದರೆ ಬದುಕಿನ ಚಿಂತೆ
ಬದುಕಿದರೆ ಕೇಡಿನ ಚಿಂತೆ
ಕೇಡಾದರೆ ಮರಣದ ಚಿಂತೆ
ಇಂತೀ ಹಲವು ಚಿಂತೆಯಲ್ಲಿ ಇದ್ದವರನು ಕಂಡೆನು
ಶಿವನ ಚಿಂತೆಯಲ್ಲಿದ್ದರೊಬ್ಬರನು ಕಾಣೆನೆಂದಾತ ನಮ್ಮ
ಅಂಬಿಗರ ಚೌಡಯ್ಯ ನಿಜಶರಣನು.

**ಕವಿ ಪರಿಚಯ**

**ಬಸವಣ್ಣ :** ೧೨ ನೇಶಮಾನದಲ್ಲಿದ್ದ ಶರಣ ಪ್ರಮುಖರು, ಪ್ರಸಿದ್ಧ ವಚನಕಾರರು, ಸಮಾಜ ಸುಧಾರಕರು. ಈ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಸಾಮಾಜಿಕ ಮತ್ತು ಧಾರ್ಮಿಕ ಮಹಾಕ್ರಾಂತಿಯ ನೇತಾರ. ಬಿಜಾಪುರ ಜಿಲ್ಲೆಯ ಬಾಗೇವಾಡಿ ಬಸವಣ್ಣನವರ ಜನ್ಮಸ್ಥಳ. ಬಿಜ್ಜಳನ ರಾಜ್ಯದ ಭಂಡಾರಿಯಾಗಿದ್ದ ಹಾಗೆ ರಾಜ್ಯದ ಭಕ್ತಿ ಭಂಡಾರಿಯೂ ಆಗಿದ್ದವರು. ವ್ಯಕ್ತಿಯ ಯೋಗ್ಯತೆಯನ್ನು ಹುಟ್ಟಿನಿಂದಲೇ ಅಳೆಯುವುದನ್ನು ಬಿಟ್ಟು ಆತನ ಗುಣದಿಂದ ನಿರ್ಧರಿಸಬೇಕೆಂದು ಸಾರಿದರು. ಇವರ ೧೦೦೦ ಕ್ಕೂ ಹೆಚ್ಚು ವಚನಗಳು ದೊರೆತಿವೆ. 'ಕೂಡಲ ಸಂಗಮದೇವ' ಇವರ ವಚನಗಳ ಅಂಕಿತ.



**ಅಕ್ಕಮಹಾದೇವಿ :** ಅಕ್ಕಮಹಾದೇವಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಉಡುತಡಿಯಲ್ಲಿ ಜನಿಸಿದಳು. ಕನ್ನಡ ಸಾಹಿತ್ಯದ ಮೊದಲ ಕವಿಯತ್ರಿ ಮತ್ತು ವಚನಗಾರ್ತಿ. ೧೨ ನೇ ಶತಮಾನದಲ್ಲಿ ಪ್ರಪ್ರಥಮವಾಗಿ ಮಹಿಳೆಯರ ಪ್ರತಿನಿಧಿಯಾಗಿ ಅಭಿವ್ಯಕ್ತಿಯಲ್ಲಿ ಪುರುಷ ಸಮಾಜವನ್ನು ಪ್ರತಿಭಟಿಸಿದವಳು. 'ಚೆನ್ನಮಲ್ಲಿಕಾರ್ಜುನ' ಎಂಬ ಅಂಕಿತದಿಂದ ವಚನಗಳನ್ನು ರಚಿಸಿ ಅಂದಿನ ಜನಸಾಮಾನ್ಯರ ಗಮನಸೆಳೆದಳು. 'ಯೋಗಾಂಗ ತ್ರಿವಿಧಿ' ಇವರ ಪ್ರಮುಖ ಕೃತಿ. ಅವರ ಕಾವ್ಯದ ಗುಣವೆಂದರೆ ಒಂದು–ವೇದನೆ, ಮತ್ತೊಂದು ನಿವೇದನೆ. ಅಕ್ಕಮಹಾದೇವಿಯಲ್ಲಿ ಸಮಾಜ ವಿಮರ್ಶೆಗಿಂತ ಸ್ವ ವಿಮರ್ಶೆಯೇ ಜಾಸ್ತಿ.

**ಅಂಬಿಗರ ಚೌಡಯ್ಯ :** ೧೨ನೇ ಶತಮಾನದ ವಚನಕಾರರಲ್ಲಿ ಅತ್ಯಂತ ವಿಶಿಷ್ಟವಾದವನು. ವೃತ್ತಿಯಿಂದ ಅಂಬಿಗ. ಪ್ರವೃತ್ತಿಯಲ್ಲಿ ಅನುಭಾವಿ. ತನ್ನ ಕಾಯಕ ಮತ್ತು ವ್ಯಕ್ತಿ ನಾಮವಾದ 'ಅಂಬಿಗರ ಚೌಡಯ್ಯ' ಎಂಬುದೇ ಇವರ ವಚನಗಳ ಅಂಕಿತವಾಗಿದೆ. ಈತನ ವಚನಗಳ ವಸ್ತು, ಭಾಷೆ, ಶೈಲಿಗಳನ್ನು ಗಮನಿಸಿದರೆ ಇವನೊಬ್ಬ ಕೆಚ್ಚೆದೆಯ ನಿಷ್ಠೂರ ಪ್ರಕೃತಿಯ, ಗ್ರಾಮ್ಯ ಮನೋಧರ್ಮದ ವಚನಕಾರ ಎಂಬುದು ಸ್ಪಷ್ಟವಾಗುತ್ತದೆ. ಇವರ ವಚನಗಳಲ್ಲಿ ಕಂಡು ಬರುವ ಸಮಾಜ ಅವ್ಯವಸ್ಥೆಯ ಚಿತ್ರ ಬೇರೆ ವಚನಕಾರರಲ್ಲಿ ಕಂಡುಬರುವುದಿಲ್ಲ. ಅಂಬಿಗರ ಚೌಡಯ್ಯನ ವಚನಗಳ ಸಮರ್ಥ ಸಾದಕವಾದ ಸತ್ಕೋಪದಿಂದ ಹೊಮ್ಮಿದವು ಆಗಿವೆ.

**ಕಠಿಣ ಪದಗಳ ಅರ್ಥ :**

ಕಳವೆ–ಭತ್ತ, ನಚ್ಚಲು–ನಂಬಲು, ವಿಷಯ–ಇಂದ್ರಿಯಸುಖ, ರೂಹು–ರೂಪು, ಓಗರ–ಅನ್ನ, ತೃಷೆ–ಬಾಯಾರಿಕೆ.

**ಪ್ರಶ್ನೆಗಳು :**

೧. ಭಕ್ತನೊಬ್ಬನ ಅಂತರಂಗದ ತೊಳಲಾಟ ಬಸವಣ್ಣನ ವಚನಗಳಲ್ಲಿ ವ್ಯಕ್ತವಾದ ಬಗೆಯನ್ನು ತಿಳಿಸಿ.

೨. ಮಹಾದೇವಿಯಕ್ಕ ಚನ್ನಮಲ್ಲಿಕಾರ್ಜುನನನ್ನು ಆತ್ಮ ಸಂಗಾತನನ್ನಾಗಿ ಭಾವಿಸಿದ ಬಗೆಯನ್ನು ವಿವರಿ

*

# ೩. ಅನ್ನಯಜ್ಞ

– ದ.ರಾ. ಬೇಂದ್ರೆ

**ಆಶಯ :**

ಪ್ರಾಣಿಯು ಪ್ರಾಣಉಳಿಯಲೆಂದು ಏನೇನು ಸೇವಿಸುವುದೋ ಅದೆಲ್ಲವೂ ಅನ್ನ, ಗಾಳಿಯೂ ಅನ್ನ, ನೀರೂ ಅನ್ನ, ಹಸಿವು ತಣಿಯುವುದೇ ಆಹಾರದಿಂದ. ಅಂತಹ ಆಹಾರಕ್ಕಾಗಿ ಹಾಹಾಕಾರ ಎದ್ದಾಗ ಅನ್ನದ ಮಹಿಮೆ ಗೊತ್ತಾಗುತ್ತದೆ. ಮನಸ್ಸು ಮತ್ತು ದೇಹ ಆರೋಗ್ಯವಾಗಿರಲು ಆಹಾರವೇ ಜೀವಾಳ. ಅಂಥ ಆಹಾರ ದಕ್ಕದಿದ್ದಾಗ ಉಂಟಾಗುವ ಕೋಲಾಹಲ ಹೇಳತೀರದು. ಕವಿ ಈ ಪದ್ಯದಲ್ಲಿ ಅನ್ನದ ಮಹತ್ವವನ್ನು, ಬದುಕಿನ ಗಮ್ಯವನ್ನು ಕುರಿತು ವಿವರಿಸಲು ಪ್ರಯತ್ನ ಪಟ್ಟಿದ್ದಾರೆ.

ಕೂಸುಗಳಿಗೆ ಹಾಲು ಇಲ್ಲ, ಪಶುಬಲಿಯೇ ನಡೆದಿದೆ
ಕಾಳು ಇದೆ ಕೂಳು ಇಲ್ಲ, ಹಣದ ಹುಚ್ಚು ಹಿಡಿದಿದೆ.
ಕತ್ತಲಲ್ಲಿ ಬೆಳಕೆ ಇಲ್ಲ, ಜಗಕೆ ಬೆಂಕಿ ಹತ್ತಿದೆ.
ಎಲ್ಲ ಇದೆ ಎಲ್ಲ ಇಲ್ಲ, ಇಲ್ಲೆ ಸುತ್ತುಮುತ್ತಿದೆ

ಸಾಕು ಎಂಬುವಂತೆ ನೀಡು, ಬೇಕು ಎಂಬ ಹೊತ್ತಿಗೆ
ಬೆಣ್ಣೆ ಎಣ್ಣೆ ಎರೆಯಬನ್ನಿ ಹಸಿದ ಹೊಟ್ಟೆ–ನೆತ್ತಿಗೆ.

ಬರುವ ಸಾವ ನೆನೆದು ಕೆಲವು ತಿನ್ನುತಿಹವು ಹೆಚ್ಚಿಗೆ
ಕಾಳು ಸಾಲದೀಗ ಜನದ ಇರುವ ಹೊಟ್ಟೆಕಿಚ್ಚಿಗೆ.
ಇದ ಕಂಡರೂ ಕಂಡು ಕೂಡ ಏಳಬೇಡ ರೊಚ್ಚಿಗೆ.
ಇದರ ಹೊಟ್ಟೆಯಲ್ಲಿ ಹುಟ್ಟತೀ ಪಿಶಾಚಿ ಹುಚ್ಚಿಗೆ



ಬಾಳ್ಮೆಯಲ್ಲಿ ತಾಳ್ಮೆಬೇಕು ಬದುಕಬೇಕು ಎಂದರೆ
ಜೀವವೆ ಸಾವಾಗಬಹುದು ಬಚ್ಚಬರಿಯೆ ನೊಂದರೆ.

ಋಣವು ರಣವು, ಜನವು ಹೆಣವು ಸಾವಿಗಾಗಿ ದುಡಿವರೇ?
ಯಾರ ಬಾಳಿಗಾಗಿ ಯಾರೊ ಯಾವೊ ಕೈಗೆ ಮಡಿವರೇ?
ಕಾವ ಕೈಯ್ಯೆ ಕೊಲ್ಲುತಿಹವು! ಮರಣದತ್ತ ನಡೆವರೇ?
ಸಾವಿಗಾಗಿ ತಪಿಸುವವರು ಬಾಳ–ಬೀಜ ಹಿಡಿವರೇ?

ಕಣ್ಣೀರಿನ ಕಡಲ ನಡುವೆ ತೇಲುತಿಹವು ನೆಲಗಳು
ತಾಯಿ–ಹಾಲು ಕುದಿಯುತಿಹುದು ಕೆಂಪೇರಲು ಜಲಗಳು.

## ಕವಿ ಪರಿಚಯ

**ದ.ರಾ. ಬೇಂದ್ರೆ :** ಬೇಂದ್ರೆಯವರು ಕನ್ನಡ ಸಾಹಿತ್ಯದಲ್ಲಿ 'ವರಕವಿ' ಎಂದೇ ಪ್ರಸಿದ್ಧರಾದವರು. ಇವರ ಕಾವ್ಯನಾಮ ಅಂಬಿಕಾತನಯ ದತ್ತ. ಅಧ್ಯಾಪಕರಾಗಿದ್ದು ಇವರು ತರುವಾಯ ಧಾರವಾಡದ ಆಕಾಶವಾಣಿ ಕೇಂದ್ರದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದವರು. ಉತ್ತರ ಕರ್ನಾಟಕದ ಆಡುಭಾಷೆಯನ್ನು ಜನಪದ ಕಾವ್ಯಮಟ್ಟನ್ನು ಬಳಸಿಕೊಂಡು ಕವಿತೆಯಲ್ಲಿ ಸಹಜತೆಯನ್ನು ಗರಿಷ್ಠಮಟ್ಟದಲ್ಲಿ ಸಹೃದಯರಿಗೆ ಉಣಬಡಿಸಿದವರು ಶ್ರೀಯುತರು. ನಾಟಕ, ವಿಮರ್ಶೆ, ಪ್ರಬಂಧಗಳ ಜೊತೆಗೆ ಕೃಷ್ಣ ಕುಮಾರಿ, ಗರಿ, ನಾದಲೀಲೆ, ಉಯ್ಯಾಲೆ, ಸಖೀಗೀತ, ಅರಳುಮರಳು, ನಾಕುತಂತಿ, ಹೃದಯ ಸಮುದ್ರ ಮುಂತಾದ ಕವನ ಸಂಕಲನವನ್ನು ರಚಿಸಿದ್ದಾರೆ. ಇತರ ಪ್ರಶಸ್ತಿಗಳ ಜೊತೆಗೆ ಭಾರತದ ಅತ್ಯುತ್ತಮ ಪ್ರಶಸ್ತಿಯಾದ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿದ್ದಾರೆ.

**ಪ್ರಶ್ನೆಗಳು :**

೧. ಅನ್ನದ ಮಹತ್ವ ಮತ್ತು ಅನ್ನದ ಅನಿವಾರ್ಯವನ್ನು ಕವಿ ಹೇಳುತ್ತಿರುವ ಪರಿಯನ್ನು ವಿವರಿಸಿ.

೨. ಅನ್ನದ ವಿವಾದದಲ್ಲಿ ನಡೆಯುತ್ತಿರುವ ರಾಜಕೀಯ ವ್ಯವಹಾರದ ವಿಡಂಬನೆಯನ್ನು ತಿಳಿಸಿ.

*

# ೪. ಸಂಪರ್ಕ

**– ಗಂಗಾಧರ ಚಿತ್ತಾಲ**

**ಆಶಯ :**

ಜೀವ ಸೃಷ್ಟಿ ಜಗತ್ತಿನ ರೋಮಾಂಚಕ ಕುತೂಕಲ. ಅದು ಪ್ರಾಣಿ, ಪಕ್ಷಿ, ವೃಕ್ಷ ಲೋಕದಲ್ಲಿಯೇ ಆಗಲಿ, ಆ ರೋಮಾಂಚನ ಪೂರ್ಣ ಅದ್ಭುತ ಲೋಕ ಸೃಷ್ಟಿಯೇ ಆಗುತ್ತದೆ. ಅದು ಜೀವವಿರುವ ಪ್ರಾಣಿ–ಪಕ್ಷಿಯಾಗಲೀ ಅಥವಾ ನಿರ್ಜೀವದಂತೆ ಕಾಣುವ ಧಾನ್ಯಗಳಾಗಲಿ ಸೃಷ್ಟಿ ಕ್ರಿಯೆಗೆ ತೆರೆದುಕೊಳ್ಳುವ ಅಮೋಘ ಕ್ರಿಯೆ ನಿಜವಾಗಿಯೂ ಅದ್ಭುತ ರೋಮಾಂಚನವೇ ಸರಿ. ಈ ಪದ್ಯದಲ್ಲಿ, ಶಾಲೆಯಲ್ಲಿ ಶಿಕ್ಷಕರು ಹೇಳಿದಂತೆ ಮಕ್ಕಳು ತಂತಮ್ಮ ಮನಸ್ಸಿನಲ್ಲಿ ಖಾಲಿಟಿನ್ನುಗಳಲ್ಲಿ ಬೀದಿ ಧೂಳುಗಳನ್ನು ತುಂಬಿ, ಮನೆಯಲ್ಲಿಯೇ ಇದ್ದ ಗೋಧಿ, ಜೋಳ, ಭತ್ತ ಇತ್ಯಾದಿ 'ಬೀಜ'ಗಳನ್ನು ಹಾಕಿ ಅವು ಹುಟ್ಟುವುದನ್ನೇ ನಿರೀಕ್ಷಿಸುತ್ತ ಇದ್ದ ರೀತಿ ಅಚ್ಚರಿ ಮೂಡಿಸಿದ್ದು ಇದನ್ನೆಲ್ಲ ನೋಡುತ್ತಿದ್ದ ಲೇಖಕರಿಗೇ ಮೋಜೆನ್ನಿಸಿ ಬೆಳೆಯುತ್ತಿರುವ ಎಳೆ ಪೈರನ್ನು ಬೆರಳಾಡಿಸಿ ಖುಷಿ ಪಟ್ಟ ಸಂದರ್ಭ ಜೀವನದ ಅಪೂರ್ವ ಕ್ಷಣವಲ್ಲದೆ ಮತ್ತೇನು?

ಕಳೆದ ವಾರ, ಕುಣಿಯುತ್ತಲೇ ಬಂದಳು ನಮ್ಮ ಸರಿತೆ!
ಸಾಲೆಯಲ್ಲಿ ಹೇಳಿದರಂತೆ
'ಒಂದಿಷ್ಟು ಗೋಧಿ, ಒಂದಿಷ್ಟು ಜೋಳ, ಭತ್ತ,
ಹೀಗೆಯೇ ಮತ್ತೇನೇನೊ
ಮನೆಯಲ್ಲೇ ನೆಟ್ಟು ಸಸಿ ಬೆಳೆಸಿ ತರಬೇಕು.

ಸರಿ, ಶುರುವಾಯ್ತು ಮಕ್ಕಳೋಡಾಟ, ಲಗುಬಗೆ, ಗಲಭೆ
ನಾವಿರುವ ಐದನೇ ಮಜಲಿನೆತ್ತರದಲ್ಲೆ ಭರದ ಬಿತ್ತನೆ ಕೆಲಸ!
ಮೋಜೆನಿಸಿ ನೋಡುತ್ತ ಕುಳಿತೆ–



ಹೊಲಗದ್ದೆ ಕಾಣದೀ ಮರಿ–ಕೃಷೀವಲರೆಲ್ಲ
ಖಾಲಿ ಟಿನ್ನುಗಳಲ್ಲಿ ಬೀದಿ ಧೂಳನು ತಂದು ಪಾತಿ ಕಟ್ಟಿ,
ಸುಕ್ಕಿದೊಣಕಲು ಬೀಜವಿಷ್ಟು ಹೂಳಿ,
ಬಾಟ್ಲಿ ನೀರಿನಲೆ ಪರ್ಜನ್ಯ ಸುರಿಸಿ,
ಕೃತಕೃತ್ಯರಂತೆ ಸುಗ್ಗಿ ಕೆಲಸ ಕಾಣುತ್ತ ನಿಂತ ಮುಗ್ಧರೀವಿ!
ಐದಾರು ದಿನ, ಬೆಳಗ್ಗೆ ಎದ್ದು ಕೂತರು
ಯಾವ ಸುದ್ದಿ ಸುಳಿವೂ ಇಲ್ಲ ಮೊದ್ದು ಮಣ್ಣಲ್ಲಿ.

ಮೊನ್ನೆ ಮಾತ್ರ,
ಒಂದೆರಡು ಕಣ ಅಲ್ಲಿ ಇಲ್ಲಿ ಅಲುಗಿದ ಕುರುಹು.
ನಿನ್ನೆಯೋ
ಒಳಗಿನೊಳಗೇ ಏನೊ
ಮೈಮುರಿದು ನಿದ್ದೆ ತಿಳಿದೇಳ್ವ ಥರ

ಇಂದೊ––––––
ಕಣ್ಣಮುಂದೇ ತೆರೆದ ಅದ್ಭುತೋದ್ಭವ ಪ್ರಹರ!
ಚಿಣ್ಣರೊಲು ದೂಡಿ ಕೊಂಬೂದಿ ಹಣಿಕಿಕ್ಕಿ
ಇಣಿಕಿವೆ ಸುತ್ತ ನೂರಾರು ಅಂಕುರ!

ನೀರ್ಮಣ್ಣ ಆರೈಕೆಗೆದ್ದ ಆಗಂತುಕರ
ಈ ಸೋಜಿಗದ ಸುತ್ತ ನೆರೆದ ಮಕ್ಕಳ ಮಧ್ಯೆ
ಸೇರಿ ನಾನೂ ಕುಳಿತೆ, ಮೈಮರೆತೆ ಮಗುವಾಗಿ.

ನಿಯಾಳಿಸುತ ಕುಳಿತೆ
ಮುದ್ದಾದ ಮೊಳಕೆಗಳ ಹಸುಳೆ ಮಿದು ನಯ ನುಣುಪ.
ತೊರೆಯ ಅಕ್ಕರೆಯೊರೆತೆ
ಹತ್ತಿರಕೆ ಬಾಗಿದೆ. ತಟ್ಟಿ ಬೆರಾಳಡಿಸಿದೆ. ಖುಶಿಪಟ್ಟೆ.

ಕುತೂಹಲದಿಂದ
ಬದಿಯ ಮಣ್ಣನ್ನಿಷ್ಟು ಸರಿಸಿ ನೋಡಿದೆ–
ಹಿಗ್ಗಿ ದುಂಡಗೆ ಗಬ್ಬವಾಗಿ ಬಿರಿದಿವೆ ಬೀಜ:
ಕೆಳಕ್ಕೆ ಬಾಯೂರಿದಲ್ಲಿ ಇಳಿಸಿವೆ ಬೇರು–ಸೂಜಿಮೊನೆ ಐದಾರು
ಒಡಲು ಬಿರಿದಲ್ಲಿ ಮೇಲಕ್ಕೆ ಕಳಿಸಿವೆ ದೇಟು ಸಸಿಯ ಮೂಲಸ್ತಂಭ!
ಖಾಲಿ ಟಿನ್ನುಗಳ ಬೀದಿ ಧೂಳಲ್ಲು ಮೈ ತಳೆದ ಸೃಜನದೀ ಕೌತುಕವ
ನಿಯಾಳಿಸುತ ಕುಳಿತೆ, ಸೋಕಿ–ಸೋಕಿ–ಬೆರಳಾಡಿಸಿದೆ.
ಉರದಲುಮ್ಮಳ, ಮತ್ತೆ ಮತ್ತೆ ಜೀಕಳಿ ಪುಳಕ
ಇಷ್ಟು ಹತ್ತಿರದ ಜೀವ ಸೃಷ್ಟಿ ಸಂಪರ್ಕಕ್ಕೆ !

## ಕವಿ ಪರಿಚಯ

**ಗಂಗಾಧರ ಚಿತ್ತಾಲ :** ಗಂಗಾಧರ ಚಿತ್ತಾಲರು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದ ಹನೇಹಳ್ಳಿಯವರು. ಡೈರೆಕ್ಟರ್ ಆಫ್ ಆಡಿಟ್ಸ್ ಆಗಿ ಲಂಡನ್‌ನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು. ಚಿತ್ತಾಲರು ಕಾಲದ ಕರೆ, ಮನುಕುಲದ ಹಾಡು, ಹರಿವ ನೀರಿದು, ಸಂಪರ್ಕ ಮುಂತಾದ ಕವನ ಸಂಕಲನಗಳನ್ನು ಬರೆದು ಕಾವ್ಯ ಜಗತ್ತನ್ನು ಶ್ರೀಮಂತಗೊಳಿಸಿದ್ದಾರೆ. ಇಂಥ ಅಂತರಂಗದ ಕವನಗಳನ್ನು ನೀಡಿದ ಚಿತ್ತಾಲರು ೧೯೮೭ ರಲ್ಲಿ ಪಾರ್ಕಿನ್‌ಸನ್ ಕಾಯಿಲೆಯಿಂದ ನಮ್ಮನ್ನಗಲಿದ್ದು ದುರಂತವೇ ಸರಿ.

## ಪ್ರಶ್ನೆಗಳು :

೧. ಮಕ್ಕಳ ಕೃಷಿಯ ಖುಷಿಯನ್ನು ವಿವರಿಸಿ.

೨. ಮಕ್ಕಳ ಕೃಷಿಯ ಚಟುವಟಿಕೆಯನ್ನು ಕಂಡ ಕವಿ ಸಂಭ್ರಮವನ್ನು ತಿಳಿಸಿ.

*